। ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ
ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ ।

ಅಂಭೃಣೀ ಸೂಕ್ತ

ಶ್ರೀ ಧೀರೇಂದ್ರತೀರ್ಥರ ಸಂಸ್ಕೃತ ವ್ಯಾಖ್ಯಾನದ
ಕನ್ನಡ ಅರ್ಥಾನುವಾದಸಹಿತ

ಧರಣೀಮಂಡಲೇ ಖ್ಯಾತಂ ಧೈರ್ಯಾದಿ ಗುಣಬೃಂಹಿತಮ್ ।
ಧಿಕ್ಕೃತಾಶೇಷವಾದೀಭಂ ಧೀರಸಿಂಹಗುರುಂ ಭಜೇ ।

ಅನುವಾದಕರು:

ಕೆ. ಸತ್ಯನಾರಾಯಣಾಚಾರ್ಯ

ಪ್ರಕಾಶಕರು :

ಪವನ ಪರಿಮಳ ಪ್ರಕಾಶನ

278, 36 ಎ ಕ್ರಾಸ್, ಏಳನೇ ಬ್ಲಾಕ್, ಜಯನಗರ

ಬೆಂಗಳೂರು-560 011

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ
ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ ॥

ಅಂಭೃಣೀ ಸೂಕ್ತ

ಶ್ರೀ ಧೀರೇಂದ್ರತೀರ್ಥರ ಸಂಸ್ಕೃತ ವ್ಯಾಖ್ಯಾನದ
ಕನ್ನಡ ಅರ್ಥಾನುವಾದಸಹಿತ

ಅನುವಾದಕರು:

ಕೆ. ಸತ್ಯನಾರಾಯಣಾಚಾರ್ಯ

ಪ್ರಕಾಶಕರು :

ಪವನ ಪರಿಮಳ ಪ್ರಕಾಶನ

278, 36 ಎ ಕ್ರಾಸ್, ಏಳನೇ ಬ್ಲಾಕ್, ಜಯನಗರ
ಬೆಂಗಳೂರು-560 011

AMBRINI SUKTA—with Kannada Translation
by Sri K. Satyanarayanacharya, and Published by
Pavana Parimala Prakashana, 278, 36 A Cross, Jayanagar
Bangalore-560011. Size Crown 8vo; No. of Pages viii and 12

ಪ್ರಥಮ ಮುದ್ರಣ: ೧,೦೦೦ ಪ್ರತಿಗಳು
ಕಾಳಯುಕ್ತಿ ಸಂವತ್ಸರ ಶ್ರಾವಣ ಬಹುಳ ದ್ವಿತೀಯಾ—20 ಆಗಸ್ಟ್ 1978

ಪ್ರತಿಗಳು ದೊರೆಯುವ ಸ್ಥಳ:
ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ
ಪೂರ್ಣಪ್ರಜ್ಞನಗರ, ಬೆಂಗಳೂರು-560 028

ಶ್ರೀಮನ್ಮಾಧ್ವ ಸಂಘ
ನಾಲ್ಕನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010

ಬೆಲೆ: ಅರವತ್ತೈದು ಪೈಸೆ

ಮುದ್ರಕರು:
ಆನಂದ್ ಪ್ರಿಂಟರ್ಸ್
25, ಗಾಂಧೀ ಬಜಾರ್, ಬೆಂಗಳೂರು-4

॥ ಶ್ರೀಕೃಷ್ಣೋ ವಿಜಯತೇ ॥

॥ ಶ್ರೀರಾಮವಿಠಲೌ ವಿಜಯೇತೇ ॥

ಆಶೀರ್ವಚನ

ಶ್ರೀ ಅಂಭೃಣೀ ಸೂಕ್ತದ, ಶ್ರೀ ಧೀರೇಂದ್ರ ತೀರ್ಥರ ವ್ಯಾಖ್ಯಾನವನ್ನು ಕನ್ನಡದಲ್ಲಿ, ಪ್ರತಿಪದಾರ್ಥ ಮತ್ತು ತಾತ್ಪರ್ಯಾರ್ಥಗಳನ್ನು ಬರೆದು ಶ್ರೀ ಸತ್ಯನಾರಾಯಣಾಚಾರ್ಯರು ಭಕ್ತರಿಗೆ ಮಹದುಪಕಾರವಮಾಡಿದ್ದಾರೆ. ಪ್ರತಿ ಒಬ್ಬರೂ ಈ ವ್ಯಾಖ್ಯಾನದ ಉಪಯುಕ್ತತೆಯನ್ನು ಪಡೆದು, ಅರ್ಥಾನುಸಂಧಾನ-ಪೂರ್ವಕ, ಈ ಸೂಕ್ತವನ್ನು ಪಠಿಸಿದರೆ ವಿಶೇಷ ಭಗವದನುಗ್ರಹಕ್ಕೆ ಪಾತ್ರರಾಗುವುದರಲ್ಲಿ ಸಂಶಯವಿಲ್ಲ. ಅಂಭೃಣೀನಾಮಕ ಲಕ್ಷ್ಮಿಯು ಈ ವ್ಯಾಖ್ಯಾನಕರಾದ ಶ್ರೀ ಸತ್ಯನಾರಾಯಣಾಚಾರ್ಯರಿಗೂ, ಅಶೇಷ ಭಗವದ್ಭಕ್ತರಿಗೂ, ಮತ್ತು ಗ್ರಂಥಪ್ರಕಾಶನಕ್ಕೆ ಕಾರಣರಾದ ಶ್ರೀ ಬಿ. ಕೆ. ರಾಮಚಂದ್ರರಾಯರಿಗೂ, ಇತೋಪ್ಯತಿಶಯ ಜ್ಞಾನ, ಭಕ್ತಿ, ವೈರಾಗ್ಯಾದಿಗಳನ್ನು ಕೊಟ್ಟು, ಇಂತಹ ಜ್ಞಾನಕಾರ್ಯಗಳನ್ನು ಅತ್ಯಧಿಕವಾಗಿ ನಡೆಸುತ್ತಾ ಇರಲೆಂದು ನಮ್ಮ ಉಪಾಸ್ಯ-ದೇವರಲ್ಲಿ ಪ್ರಾರ್ಥಿಸುತ್ತೇವೆ.

ಕಾಳಯುಕ್ತಿ ಸಂವತ್ಸರ
ಶ್ರಾವಣ ಬಹುಳ ತೃತೀಯಾ
ಚಾತುರ್ಮಾಸ್ಯ
ಶ್ರೀ ರಾಘವೇಂದ್ರಸ್ವಾಮಿಗಳ
ಉತ್ತರಾರಾಧನೆ (21-8-78)
ಪೂರ್ಣಪ್ರಜ್ಞ ವಿದ್ಯಾಪೀಠ
ಬೆಂಗಳೂರು-560 028

ಇತ್ಯನೇಕ ನಾರಾಯಣಸ್ಮರಣೆಗಳು,
ಶ್ರೀ ಶ್ರೀ ವಿಶ್ವೇಶತೀರ್ಥಶ್ರೀಪಾದಂಗಳವರು
ಶ್ರೀ ಪೇಜಾವರ ಮಠ

॥ ಶ್ರೀ ಗುರುಭ್ಯೋ ನಮಃ ॥ ॥ ಹರಿಃ ಓಮ್ ॥

ಪ್ರಸ್ತಾವನಾ

ಶ್ರೀ ರಾಘವೇಂದ್ರೋ ಹರಿಪಾದಕಂಜ ನಿಷೇವಣಾಲ್ಲಬ್ಧ ಸಮಸ್ತ ಸಂಪತ್ ।
ದೇವಸ್ವಭಾವೋ ದಿವಿಜದ್ರುಮೋಽಯಃ ಇಷ್ಟಪ್ರದೋ ಮೇ ಸತತಂ ಸಂಭೂಯಾತ್ ॥

ಋಕ್ಶಾಖೆಯಲ್ಲಿ ಒಂದು ಸಹಸ್ರದ ಒಂದು (೧೦೦೧) ಸೂಕ್ತಗಳು ಇವೆ. ಇವುಗಳ ಮಧ್ಯದಲ್ಲಿ ಅಂಭೃಣೀಸೂಕ್ತವು ಮುಖ್ಯವೃತ್ತಿಯಿಂದ ಲಕ್ಷ್ಮೀ ಮಹಿಮೆಯನ್ನು ಪರಮ ಮುಖ್ಯವೃತ್ತಿಯಿಂದ ತದಂತರ್ಗತ ವಿಷ್ಣುವಿನ ಮಹಿಮೆಯನ್ನೂ ಹೇಳುತ್ತದೆ. “ಯಸ್ಯ ಪ್ರಸಾದಾತ್ ಪರಮಾರ್ತಿ ರೂಪಾದಸ್ಮಾತ್ಸಂಸಾರನ್ಮುಚ್ಯತೇ ನಾಪರೇಣ” ಎಂಬ ನಾರಾಯಣಶ್ರುತಿಯಿಂದ ಶ್ರೀ ಭಗವಂತನ ಪ್ರಸಾದದಿಂದಲೇ ಸತ್ಯವಾದ ಬಂಧ ನಿವೃತ್ತಿಯು ಸಾಧ್ಯವಾಗುವುದು. ಅಂತಹ ಪ್ರಸಾದವು “ಪ್ರಿಯೋಹಿ ಜ್ಞಾನಿನೋಽತ್ಯರ್ಥಂ” ಇತ್ಯಾದಿಗಳಿಂದ ಜ್ಞಾನದಿಂದಲೇ ಸಾಧ್ಯವು. ಅಂತಹ ಜ್ಞಾನವು ವೇದಾದಿ ಶಾಸ್ತ್ರಗಳಿಂದಲೇ ಹುಟ್ಟಬೇಕು. ಆದಕಾರಣ ವೇದಗಳು ವಿಷ್ಣುವಿನ ಜ್ಞಾನವನ್ನು ಹುಟ್ಟಿಸುತ್ತವೆ. ತಥಾಚ “ಸರ್ವೇ ವೇದಾಃ ವಿಷ್ಣುಜ್ಞಾನಜನಕಾಃ ತತ್ಸಾಧ್ಯಮೋಕ್ಷಾರ್ಥಂ ಪ್ರವೃತ್ತತ್ವಾತ್” ಮತ್ತು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ “ವೇದೈಶ್ಚ ಸರ್ವೈರಹಮೇವ ವೇದ್ಯಃ ವೇದಾಂತ ಕೃತ್ ವೇದವಿದೇವಚಾಹಂ” ಸರ್ವ ವೇದಗಳಿಂದಲೂ ಪ್ರತಿಪಾದ್ಯನೆಂದು ಅರ್ಜುನನಿಗೆ ಉಪದೇಶ ಮಾಡಿರುತ್ತಾನೆ. ಪ್ರಕೃತ ಅಂಭೃಣೀಸೂಕ್ತವು ಹಾಗಾದರೆ ವಿಷ್ಣುಪರವಾದ ಅರ್ಥವನ್ನೇ ಪ್ರತಿಪಾದಿಸಲಿ, ಲಕ್ಷ್ಮ್ಯಾದಿ ರೂಪವಾದ ಅರ್ಥವನ್ನು ಪ್ರತಿಪಾದಿಸದೇನೆ ಇರಲಿ ಎಂದರೆ, ‘ಓಂ ಕಲ್ಪನೋಪದೇಶಾತ್ ಓಂ’ (೧-೪-೧೧) ಎಂಬ ಸೂತ್ರದ ಪ್ರಕಾರ ಭಗವತ್ಪಾದರು ಅನುವ್ಯಾಖ್ಯಾನದಲ್ಲಿ “ತೇಷು ತೇಷು ಪದಾರ್ಥೇಷು ರೂಢಿರಂಗಿ ಕೃತಾಯತಃ । ಪ್ರಯೋಜನ ಬಹುತ್ವೇನ ತಸ್ಯತಸ್ಯಾ ವಿರೋಧತಃ । ಉಪದೇಶಾದಿ ಸಾಮರ್ಥ್ಯಾದ್ವಿಷ್ಣೌ ಶಕ್ತಿಶ್ಚ ಗೃಹ್ಯತೇ” ಎಂಬಲ್ಲಿ ಲಕ್ಷ್ಮ್ಯಾದಿ ದೇವತಾಸ್ವರೂಪಸಿದ್ಧಿ ಮೊದಲಾದ ಬಹು ಪ್ರಯೋಜನಗಳು ಲಭಿಸುವುದಕ್ಕಾಗಿ

ಆಯಾಯ ದೇವತಾರೂಪವಾದ ಅರ್ಥವು ಅವಶ್ಯಕವೆಂದು ಹೇಳಿದೆ ಮತ್ತು ನಿಗಮ, ನಿಗಂಟು, ವ್ಯಾಕರಣಾದಿಗಳಿಂದ ಸಿದ್ಧವಾದ ವ್ಯುತ್ಪತ್ತಿಯಿಂದ ಲಭ್ಯವಾದ ಅರ್ಥವನ್ನು ಬಿಡುವುದು ಸರ್ವಥಾ ಯುಕ್ತವಲ್ಲ. ಮತ್ತು "ತ್ರಯೋಽರ್ಥಾಃ ಸರ್ವವೇದೇಷು ದಶಾರ್ಥಾಃ ಸರ್ವಭಾರತೇ। ವಿಷ್ಣೋಃಸಹಸ್ರ-ನಾಮಪಿ ನಿರಂತರ ಶತಾರ್ಥಕಂ" ಎಂಬ ಸ್ಕಾಂದಪುರಾಣ ವಚನದಂತೆ ವೇದಗಳಿಗೆ ೩ ಅರ್ಥಗಳು ಇವೆ. ಅವು ಯಾವುವೆಂದರೆ (೧) ತತ್ತನ್ಮಂತ್ರದೇವತಾ (೨) ತದಂತರ್ಗತ ವಿಷ್ಣು (೩) ಅಧ್ಯಾತ್ಮ, ಹೀಗೆ ಋಗ್ಭಾಷ್ಯದಲ್ಲಿ ಶ್ರೀಮದಾಚಾರ್ಯರು ನಲ್ವತ್ತು ಸೂಕ್ತಗಳಿಗೆ ವ್ಯಾಖ್ಯಾನಮಾಡಿ ತೋರಿಸಿ ಮುಂದೆ ಸಮಸ್ತ ವೇದಗಳಿಗೂ ಭಗವತ್ಪರ ಅರ್ಥಮಾಡುವುದು ಸಾಧ್ಯವೆಂದು ತೋರಿಸಿಕೊಟ್ಟಿದ್ದಾರೆ. ಆದ್ದರಿಂದ ಲಕ್ಷ್ಮೀ ಮಹಿಮಾ ಜ್ಞಾನವು ಪರಮಾತ್ಮನ ಜ್ಞಾನಕ್ಕೆ ಸಾಧನವೆಂದು ತಿಳಿದು ದೇವಪೂಜಾ ಕಾಲದಲ್ಲಿ ನಿರ್ಮಾಲ್ಯ ವಿಸರ್ಜನೆ ಮಾಡುವಾಗ ಈ ಸೂಕ್ತವನ್ನು ಅರ್ಥಾನುಸಂಧಾನಪೂರ್ವಕ ಪಠಿಸಿದರೆ ಹೆಚ್ಚುಹೆಚ್ಚು ಜ್ಞಾನವಾಗಿ ಶ್ರೀಹರಿಯ ಅನುಗ್ರಹಕ್ಕೆ ಪಾತ್ರರಾಗುವುದರಲ್ಲಿ ಸಂದೇಹವೇ ಇಲ್ಲ. ಅಧ್ಯಯನವು ಕೇವಲ ಕಂಠಪಾಠ ಮಾತ್ರ ಮಾಡಿದರೆ ಸಾಲದು. ಅರ್ಥಾನುಸಂಧಾನವಿಲ್ಲದಿದ್ದರೆ—

'ಸ್ಥಾಣುರಯಂ ಭಾರಹಾರಃ ಕಿಲಾ ಭೂದಧೀತ್ಯ ವೇದಂ ನ ವಿಜಾನತಿ-ಯೋಽರ್ಥಂ।'

"ವೇದವನ್ನು ಓದಿ ಅರ್ಥಜ್ಞಾನ ಇಲ್ಲದಿದ್ದರೆ ಭಾರವನ್ನು ಹೊತ್ತ ಮೋಟು ಮರದಂತೆ" ಎಂದು ಶ್ರುತಿಯೇ ನಿಂದಿಸಿರುವುದು. ಆದ್ದರಿಂದ ಈ ಸೂಕ್ತಕ್ಕೆ ಅಪರೋಕ್ಷಜ್ಞಾನಿಗಳಾದ ಶ್ರೀ ರಾಘವೇಂದ್ರಮಠದ ಪೀಠಿಗೆಯಲ್ಲಿ ಬಂದಂತ ರಿತ್ತಿ ಶ್ರೀ ಧೀರೇಂದ್ರತೀರ್ಥಶ್ರೀಪಾದರು ಸಂಸ್ಕೃತದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಅನೇಕ ಜನಗಳಿಗೆ ಸಂಸ್ಕೃತ ವ್ಯಾಖ್ಯಾನದ ತಿಳಿಗನ್ನಡ ರೂಪಾಂತರವನ್ನು ತಿಳಿಸಿ, ಭಕ್ತರು ಮಾಡತಕ್ಕ ದೇವಪೂಜಾಕಾರ್ಯವು ವಿಶೇಷ ಫಲದಾಯಕವಾಗಬೇಕೆಂದು, ಶ್ರೀಹರಿವಾಯುಗಳ ಪ್ರೇರಣಾನುಸಾರ ಈ ಕಾರ್ಯವನ್ನು ಮಾಡಿರುತ್ತೇನೆ. ಇದರ ಕನ್ನಡಾನುವಾದವನ್ನು ಪರಿಶೀಲಿಸಿದ ನಮ್ಮ ಗುರುಗಳಾದ ಶ್ರೀ ನ್ಯಾಯವೇದಾಂತ ವಿದ್ವಾನ್ ಶ್ರೀ ಯಳಮೇಲಿ ವಾಸುದೇವಾಚಾರ್ಯರಿಗೂ ಹಾಗೂ ಶ್ರೀಮನ್ನ್ಯಾಯಸುಧಾವನ್ನು ಕನ್ನಡಕ್ಕೆ

ವ್ಯಾಖ್ಯಾನಿಸಿದ ಪಂಡಿತ ಶ್ರೀ ಜಾಲಿಹಾಳ್ ಕೇಶವಾಚಾರ್ಯರಿಗೂ ಅನಂತ ಪ್ರಣಾಮಗಳು. ಈ ಕೃತಿಯನ್ನು ಸಜ್ಜನರಿಗೆ ಉಪಯುಕ್ತಪಡಿಸಲು ಶ್ರೀ ರಾಘವೇಂದ್ರ- ಶ್ರೀ ಧೀರೇಂದ್ರ- ತೀರ್ಥರ ಅಂತರಂಗಭಕ್ತರಾದ ಶ್ರೀಮಾನ್ ಬಿ. ಕೆ. ರಾಮಚಂದ್ರರಾಯರು ಮುದ್ರಣದ ಖರ್ಚನ್ನು ವಹಿಸಿಕೊಂಡು ಈ ಕಾಳಯುಕ್ತಿ ಸಂವತ್ಸರದ ಶ್ರೀ ರಾಘವೇಂದ್ರತೀರ್ಥರ ಆರಾಧನೆಯಂದು, ಗುರುಗಳಿಗೆ ಸಮರ್ಪಿಸಿರುತ್ತಾರೆ.

ಈ ವ್ಯಾಖ್ಯಾನಕ್ಕೆ ಶ್ರೀ ಶ್ರೀ ೧೦೮ ಪೇಜಾವರ ಮಠಾಧೀಶರು ತಮ್ಮ ಚಾತುರ್ಮಾಸ್ಯದ ಅವಧಿಯಲ್ಲಿ ಜ್ಞಾನಪ್ರಸಾರ ಕಾರ್ಯಾಂಗವಾಗಿ ವಿಶೇಷವಾಗಿ ಅನುಗ್ರಹಿಸಿರುತ್ತಾರೆ. ಅವರಿಗೂ ನನ್ನ ಅನಂತ ಪ್ರಣಾಮಗಳನ್ನು ಸಮರ್ಪಿಸಿ ಉಪಸಂಹರಿಸುತ್ತೇನೆ.

ಈ ಕೃತಿಯನ್ನು ಅಂದವಾಗಿ, ಚೊಕ್ಕವಾಗಿ ಮುದ್ರಿಸಿದ ಆನಂದ ಪ್ರಿಂಟರ್ಸ್‌ನ ವ್ಯವಸ್ಥಾಪಕರಾದ ಶ್ರೀ ಶ್ರೀಶಮೂರ್ತಿಯವರಿಗೂ ಸಪ್ರೇಮ ವಂದನೆಗಳು.

" ಪ್ರೀಣಯಾಮೋ ವಾಸುದೇವಂ "

॥ ಶ್ರೀಕೃಷ್ಣಾರ್ಪಣಮಸ್ತು ॥

ರಾಜಾಜಿನಗರ, ಬೆಂಗಳೂರು-೧೦
ತಾ॥ 20-8-1978
ಕಾಳಯುಕ್ತಿ ಶ್ರಾವಣ ಬಹುಳ ದ್ವಿತೀಯಾ

ಇತಿ ವೈಷ್ಣವದಾಸ
ಕೆ. ಸತ್ಯನಾರಾಯಣಾಚಾರ್ಯ

ಪೀಠಿಕಾ

ಈ ಅಂಭೃಣೀ ಸೂಕ್ತವು ಋಗ್ವೇದದ ಹತ್ತನೇ ಮಂಡಲದ ೧೨೫ನೇ ಮಂತ್ರವಾಗಿರುತ್ತದೆ. ಈ ಮಂತ್ರಕ್ಕೆ ವಾಗಾಂಭೃಣೀ ಋಷಿಯು, ಸರ್ವಗತನಾದ ಪರಮಾತ್ಮನು ದೇವತೆಯು, ತ್ರಿಷ್ಟುಪ್ ಛಂದಸ್ಸು, ಎಂಟು ಮಂತ್ರಗಳಿಂದ ಯುಕ್ತವಾದುದು. ಈ ಸೂಕ್ತದಲ್ಲಿ ಅಂಭೃಣೀನಾಮಕ ಲಕ್ಷ್ಮಿಯು ತನ್ನ ಮಹಿಮೆಯನ್ನು ಮತ್ತು ಮುಖ್ಯವಾಗಿ ಈ ಮಹಿಮೆಗೆ ಕಾರಣಕರ್ತನಾದ ಶ್ರೀ ನಾರಾಯಣನನ್ನು ಹೇಳುತ್ತಾಳೆ. "ನಾರಾಯಣನು ದೇವಾಸುರರಿಗಿಂತಲೂ ಪರಮ ಶ್ರೇಷ್ಠನು. ನನ್ನ ಮಹಿಮೆಯಾದರೋ ಪರಿಮಿತಿ ಉಳ್ಳದ್ದು; ನಾರಾಯಣನ ಮಹಿಮೆಯಾದರೋ ಅಪರಿಮಿತವಾದದ್ದು" ಎಂದು ತನ್ನ ಭಕ್ತ-ಜನರಿಗೆ ವೇದಮುಖದಿಂದ ಉಪದೇಶಿಸುತ್ತಾಳೆ.

ಸಕಲ ಸದ್ವೈಷ್ಣವರು ಈ ಸೂಕ್ತವನ್ನು ನಿರ್ಮಾಲ್ಯವಿಸರ್ಜನೆ ಮಾಡುವಾಗ ಪಠಿಸುವರು. ಸ್ವರಬದ್ಧವಾಗಿ ಪಾರಾಯಣ ಮಾಡಿದವರಿಗೆ ಶ್ರೀ ಅಂಭೃಣೀ-ನಾಮಕ ಲಕ್ಷ್ಮಿಯ ಅನುಗ್ರಹವು ವಿಶೇಷವಾಗಿ ಲಭಿಸುತ್ತದೆ.

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ
ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ ॥

ಅಂಭೃಣೀ ಸೂಕ್ತ

ಅಹಂ ರುದ್ರೇಭಿರಿತ್ಯಷ್ಟರ್ಚಸ್ಯ ಸೂಕ್ತಸ್ಯ, ಅಂಭೃಣೀ ವಾಗಂಭೃಣೀ-ವಾಚಸ್ತ್ರಿಷ್ಟುಪ್, ಪರಮಾತ್ಮ ದೇವತಾ, ದ್ವಿತೀಯಾ ಜಗತಿ ಛಂದಃ ನಿರ್ಮಾಲ್ಯ ವಿಸರ್ಜನೇ ವಿನಿಯೋಗಃ ॥

ಮಂತ್ರ

ಅಹಂ ರುದ್ರೇಭಿರ್ವಸುಭಿಶ್ಚರಾಮ್ಯಹಮಾದಿತ್ಯೈರುತವಿಶ್ವದೇವೈಃ ।

ಅಹಂ ಮಿತ್ರಾ ವರುಣೋಭಾ ಬಿಭರ್ಮ್ಯಹಮಿಂದ್ರಾಗ್ನೀ

ಅಹಮಶ್ವಿನೋಭಾ ॥ ೧ ॥

ಮಂತ್ರಸ್ಥ ಪದಗಳ ಅನ್ವಯ

ಅಹಂ ರುದ್ರೇಭಿಃ ವಸುಭಿಃ ಆದಿತ್ಯೈಃ ವಿಶ್ವದೇವೈರುತ ಚರಾಮಿ । ಅಹಂ ಉಭಾ ಮಿತ್ರಾವರುಣಾ ಬಿಭರ್ಮಿ । ಅಹಂ ಇಂದ್ರಾಗ್ನೀ ಬಿಭರ್ಮಿ । ಅಹಂ ಉಭಾ ಅಶ್ವಿನಾ ಬಿಭರ್ಮಿ ॥

ಮಂತ್ರಾರ್ಥ

ಅಹಂ—ಅಂಭೃಣೀನಾಮಕಳಾದ ನಾನು (*ಅಹಂ ಎಂಬ ಪದದಿಂದ ಪರಮ ಮುಖ್ಯ ವೃತ್ತಿಯಿಂದ ದೇವನಾದ ಶ್ರೀಹರಿಯನ್ನೂ ಅಮುಖ್ಯವೃತ್ತಿಯಿಂದ

---

* ಅಹಂ ನಾಮ ಹರಿರ್ನಿತ್ಯ ಅಹೇಯತ್ವಾತ್ ಪ್ರಕೀರ್ತಿತಃ (ವಿಷ್ಣುತತ್ವನಿರ್ಣಯ)

ಚೇತನಳಾದ ಲಕ್ಷ್ಮೀಯನ್ನೂ, ಕ್ಷೀರ ಮತ್ತು ನೀರು ಹೇಗೆ ಬೆರೆತಿರುತ್ತದೋ ಹಾಗೆ, " ಲಕ್ಷ್ಮೀದೇವಿಯರ ಅಂತರ್ಯಾಮಿ " ಎಂಬ ಅರ್ಥದಿಂದ ತಿಳಿಯಬೇಕು.) ರುದ್ರೇಭಿಃ – ಏಕಾದಶ ರುದ್ರರಿಂದಲೂ[1], ವಸುಭಿಃ – ಅಷ್ಟವಸುಗಳಿಂದಲೂ[2], ಆದಿತ್ಯೈಃ–ಹನ್ನೊಂದು ಆದಿತ್ಯರಿಂದಲೂ[3] (ವಿಷ್ಣುವನ್ನು ಬಿಟ್ಟು), ವಿಶ್ವದೇವೈ-ರುತ–ಸತ್ಯವಸು, ಪುರೂರವ, ಆರ್ದ್ರವ, ಧುರಿಲೋಚನ, ಕಾಲಕಾಮ, ಪುರೂಕುತ್ಸ ಇತ್ಯಾದಿ ಹತ್ತು ವಿಶ್ವೇದೇವತೆಗಳಿಂದಲೂ, ಅಥವಾ ಉತ–ನಲವತ್ತೊಂಬತ್ತು ಮರುದ್‌ಗಣಗಳಿಂದಲೂ ಸಹ, ಚರಾಮಿ – ಅವರಿಗೆ ನಿಯಾಮಕಳಾಗಿ, ಪರಿವಾರದಿಂದ ಕೂಡಿದವಳಾಗಿ ಚರಿಸುತ್ತೇನೆ. ಅಹಂ ಉಭಾ–ನಾನು, ಇಬ್ಬರಾದ, ಮಿತ್ರಾವರುಣಾ–ಮಿತ್ರಾವರುಣರನ್ನು, ಬಿಭರ್ಮಿ–ಧರಿಸುತ್ತೇನೆ ಮತ್ತು ಪೋಷಿಸುತ್ತೇನೆ. ಅಹಂ ಇಂದ್ರಾಗ್ನೀ ಬಿಭರ್ಮಿ–ನಾನು ಇಂದ್ರ ಮತ್ತು ಅಗ್ನಿಯನ್ನು ಪೋಷಿಸುತ್ತೇನೆ. ಅಹಂ ಉಭಾ ಅಶ್ವಿನಾ ಬಿಭರ್ಮಿ–ನಾನು ಇಬ್ಬರಾದ ಅಶ್ವಿನೀ ದೇವತೆಗಳನ್ನು ಪೋಷಿಸುತ್ತೇನೆ. ಅಹಂ ಎಂಬ ಪುನರುಕ್ತಿಯು ಔಪಚಾರಿಕವಾಗಿ ಅಲ್ಲ, ಅಂದರೆ ನಾನು ಮತ್ತು ನನ್ನ ಅಂತರ್ಯಾಮಿಯೇ ಹೊರತು, ಬೇರೊಬ್ಬರ ಸಹಾಯ ಬೇಕಿಲ್ಲ. ಉಭಾ ಎಂಬ ಪದದಿಂದ ಮುಕ್ತಾ ಅಮುಕ್ತ ರಾಶಿಗಳಲ್ಲಿರುವ ದೇವತೆಗಳನ್ನೂ ಧರಿಸುತ್ತೇನೆ ಮತ್ತು ಪೋಷಿಸುತ್ತೇನೆ.

ತಾತ್ಪರ್ಯ

ಅಂಭೃಣೀನಾಮಕ ಲಕ್ಷ್ಮೀಯು ತನ್ನ ಮಹಿಮೆಯನ್ನು ಹೇಳಿಕೊಳ್ಳುತ್ತಾಳೆ. ನಾನು ಏಕಾದಶ ರುದ್ರರಿಂದಲೂ, ಅಷ್ಟವಸುಗಳಿಂದಲೂ, ವಿಷ್ಣು ವಿನಾ ಹನ್ನೊಂದು ಆದಿತ್ಯರಿಂದಲೂ, ಹತ್ತು ವಿಶ್ವೇ ದೇವತೆಗಳಿಂದಲೂ,

---

1 ಭೀಮ, ರೈವತ, ಓಜ, ಅಜೈಕಪಾದ, ಮಹಾನ್, ಬಹುರೂಪ, ಭವ, ವಾಮ, ಉಗ್ರ, ವೃಷಾಕಪಿ, ಅಹಿರ್ಬುಧ್ನಿ

2 ದ್ರೋಣ, ಧ್ರುವ, ದೋಷ, ಅರ್ಕ, ಅಗ್ನಿ, ಪ್ರಾಣ, ದ್ಯು, ವಿಭಾವಸು

3 ದೇವೇಂದ್ರ, ಉರುಕ್ರಮಸೂರ್ಯ, ಮಿತ್ರ, ವರುಣ, ಪರ್ಜನ್ಯ. ಭಗ, ಪೂಷಾ, ವಿವಸ್ವಾನ್, ಸವಿತೃ, ಧಾತಾ, ಅರ್ಯಮ, ತ್ವಷ್ಟಾ. (ಇವರಲ್ಲಿ ವಿಷ್ಣುವಿನ ಅವತಾರ ಉರುಕ್ರಮ ಸೂರ್ಯ)

ನಲವತ್ತೊಂಬತ್ತು ಮರುತ್ ಗಣದಿಂದಲೂ ಕೂಡಿ, ಅವರಿಗೆ ನಿಯಾಮಕಳಾಗಿ ಚರಿಸುತ್ತೇನೆ.

ನಾನು ಮಿತ್ರಾ ವರುಣರನ್ನು, ಇಂದ್ರ ಮತ್ತು ಅಗ್ನಿಯನ್ನು, ಅಶ್ವಿನಿ ದೇವತೆಗಳನ್ನು ಧರಿಸುತ್ತೇನೆ ಮತ್ತು ಪೋಷಿಸುತ್ತೇನೆ. ಅಹಂ ಎಂಬ ಪದವು ಮುಖ್ಯತಃ ಅಂತರ್ಯಾಮಿಯಾದ ಪರಮಾತ್ಮನೆ ಹೊರತು ಬೇರೊಬ್ಬರಲ್ಲ. 'ಉಭಾ' ಎಂಬ ಪದದಿಂದ ಮುಕ್ತ ಮತ್ತು ಅಮುಕ್ತದಶೆಯಲ್ಲಿರುವ ದೇವತಾಗಣಗಳನ್ನು ಧರಿಸಿ ಪೋಷಿಸುತ್ತೇನೆ.

ವ್ಯಾಕರಣ ವಿಶೇಷ

ಬಿಭರ್ಮಿ–ಡುಭೃಞ್ ಭರಣೇ ಧಾತು, ಸಕರ್ಮಕ

ಅಹಂ ಸೋಮಮಾಹನಸಂ ಬಿಭರ್ಮ್ಯಹಂ

ತ್ವಷ್ಟಾರಮುತಪೂಷಣಂ ಭಗಮ್ ।

ಅಹಂ ದಧಾಮಿ ದ್ರವಿಣಂ ಹವಿಷ್ಮತೇ

ಸುಪ್ರಾವ್ಯೇ೩ಯಜಮಾನಾಯ ಸುನ್ವತೇ ॥ ೨ ॥

ಅನ್ವಯ

ಅಹಂ ಆಹನಸಂ ಸೋಮಂ ಬಿಭರ್ಮಿ । ಉತ ತ್ವಷ್ಟಾರ ಪೂಷಣಂ ಭಗಂ ಚ ಅಹಂ ಬಿಭರ್ಮಿ । ಹವಿಷ್ಮತೇ ಸುಪ್ರಾವ್ಯೇ ಸುನ್ವತೇ ಯಜಮಾನಾಯ ದ್ರವಿಣಂ ಅಹಂ ದದಾಮಿ ॥

ಮಂತ್ರಾರ್ಥ

ಅಹಂ–ನಾನು, ಆಹನಸಂ–ಅಭಿಷೂಯಮಾಣವಾದ ಅಥವಾ ಕುಡಿಯಲು ಅರ್ಹವಾದ, ಸೋಮಂ–ಸೋಮಲತಾ ರಸವನ್ನು ಅಂದರೆ, ತದಭಿಮಾನಿಯಾದ

ಚಂದ್ರನನ್ನು ಕೂಡ, ಬಿಭರ್ಮಿ–ಪೋಷಿಸುತ್ತೇನೆ. ಉತ–ಮತ್ತೂ ಕೂಡ, ತ್ವಷ್ಟಾರಂ, ಪೂಷಣಂ, ಭಗಂ ಚ ಅಹಂ ಬಿಭರ್ಮಿ–ತ್ವಷ್ಟಾರ, ಪೂಷಣ, ಭಗ (ಎಂಬ ಸೂರ್ಯ)ರನ್ನೂ ಪೋಷಿಸುತ್ತೇನೆ. ಹವಿಷ್ಮತೇ–ಪುರೋಡಾಶ ಎಂಬ ಹವಿಸ್ಸು ಉಳ್ಳಂಥ, ಸುಪ್ರಾವ್ಯೇ–ಶೋಭನರಾದ ಹವಿರ್ದೇವತೆಗಳಿಗೆ ಪ್ರಾಪಕ ಮಾಡಿಸುವವಳು, ಸುನ್ವತೇ–ಸೋಮಲತೆಯನ್ನು ಕುಡಿಯುವ ಹಾಗೆ ಮಾಡುವವಳು, ಯಜಮಾನಾಯ–ಯಷ್ಟ್ರೈ ಅಂದರೆ ಯಜ್ಞಮಾಡುವವನಿಗೆ, ದ್ರವಿಣಂ–ಜ್ಞಾನರೂಪ, ಧನರೂಪವಾದ ದೈವಮಾನುಷ ಸಂಪತ್ತನ್ನು, ದಧಾಮಿ – ಕೊಡುವುದಕ್ಕೋಸ್ಕರ ಧರಿಸಿದ್ದೇನೆ.

ತಾತ್ಪರ್ಯ

ಅಂಭೃಣೀಯಾದ ನಾನು ಸೋಮಾಭಿಮಾನಿಯಾದ ಚಂದ್ರನನ್ನೂ, ತ್ವಷ್ಟಾರ, ಪೂಷಣ, ಭಗ ಇವರನ್ನೂ ಪೋಷಿಸಿ, ಹವಿರ್ದೇವತೆಗಳಿಗೆ ಪುರೋಡಾಶಾದಿ ಹವಿಸ್ಸನ್ನು ಕೊಡಿಸಿ, ಯಜ್ಞಮಾಡುವ ಯಜಮಾನನಿಗೆ, ಜ್ಞಾನ ಧನ ಇತ್ಯಾದಿ ದೈವಮಾನುಷ ಸಂಪತ್ತನ್ನು ಕೊಡುವುದಕ್ಕೋಸ್ಕರ ಧರಿಸಿರುತ್ತೇನೆ.

ಅಹಂ ರಾಷ್ಟ್ರೀ ಸಂಗಮನೀ ವಸೂನಾಂ
ಚಿಕಿತುಷೀ ಪ್ರಥಮಾ ಯಜ್ಞಿಯಾನಾಂ।
ತಾಂ ಮಾ ದೇವಾ ವ್ಯದಧುಃ ಪುರುತ್ರಾ
ಭೂರಿಸ್ಥಾತ್ರಾಂ ಭೂರ್ಯಾ ವೇಶಯಂತೀಮ್ ॥ ೩ ॥

ಅನ್ವಯ

ಅಹಂ ರಾಷ್ಟ್ರೀ ವಸೂನಾಂ ಸಂಗಮನೀ ಚಿಕಿತುಷೀ ಯಜ್ಞಿಯಾನಾಂ ಪ್ರಥಮಾ ಭೂರಿಸ್ಥಾತ್ರಾಂ ಭೂರಿ ಆವೇಶಯಂತೀಂ। ತಾಂ ಮಾ ದೇವಾಃ ಪುರುತ್ರಾ ವ್ಯದಧುಃ ॥

ಮಂತ್ರಾರ್ಥ

ಅಹಂ ರಾಷ್ಟ್ರೀ–ನಾನು ಸರ್ವಸ್ವಾಮಿನೀ, ವಸೂನಾಂ–ದೈವಮಾನುಷ ಸಂಪತ್ತನ್ನು, ಸಂಗಮನೀ–ಉಪಾಸಕರಿಗೆ ಸಂಗಮಮಾಡಿಸಿ ಕೊಡುವವಳು ಅಥವಾ ಹೊಂದಿಸಿಕೊಡುವವಳು, ಚಿಕಿತುಷೀ–ಜಗನ್ನಿರ್ಮಾಣ ಮಾಡಿದವಳು, ಅಥವಾ ಜ್ಞಾನವತೀ, ಸರ್ವಜ್ಞಾ, ಸರ್ವತ್ರದಲ್ಲೂ ವಾಸಮಾಡುವವಳು, ಯಜ್ಞಿಯಾನಾಂ – ಯಜ್ಞಾರ್ಹರಾದ ಅಥವಾ ಯಜ್ಞದಲ್ಲಿ ಆರಾಧ್ಯರಾದ ದೇವತೆಗಳ ಮಧ್ಯದಲ್ಲಿ, ಪ್ರಥಮಾ – ಮೊದಲನೆಯವಳು, ಅಥವಾ ಯಜ್ಞ ಮಾಡುವವರಿಗೆ ದೈವಮಾನುಷ ಸಂಪತ್ತನ್ನು ಹೊಂದಿಸಿಕೊಡುವವಳು, ಭೂರಿ-ಸ್ಥಾತ್ರಾಂ–ಈ ರೀತಿಯಾಗಿ ವಿಶಿಷ್ಟಳಾಗಿ, ಬಹುರೂಪದಿಂದ, ದುರ್ಗಾ, ಕಾಲೀ, ಅಂಬಿಕಾ, ಭಗವತೀ ಇತ್ಯಾದಿ ನಾನಾರೂಪದಿಂದ ಇರುವವಳು. ಹಾಗಾದರೆ ಚಂಡಿಕಾ, ಕಾಲೀ, ಇತ್ಯಾದಿ ಜೀವರುಗಳಿಗೆ ನನ್ನ ಐಕ್ಯವನ್ನು ಹೇಳಬೇಡಿರಿ. ಭೂರಿ–ಹೆಚ್ಚಾಗಿ, ಬಹುಳವಾಗಿ ಚಂಡಿಕಾದಿ ಜೀವರಲ್ಲಿ, ಆವೇಶಯಂತೀಂ–ಅವರಲ್ಲಿ ಆವಿಷ್ಟಳಾಗಿ ನೆಲಸಿರುವವಳು, ತಾಂ ಮಾ–ಈ ಮೇಲಿನ ಗುಣವಿಶಿಷ್ಟಳಾದ ನನ್ನನ್ನು, ದೇವಾಃ–ಭಕ್ತರು, ಪುರುತ್ರಾ–ವಿಂಧ್ಯ, ಕರವೀರ ಮುಂತಾದ ಬಹಳ ಕ್ಷೇತ್ರಗಳಲ್ಲಿ, ವ್ಯದಧುಃ – ನಾನಾ ವಿಧ ಜನರಿಂದ ಪೂಜೆಗೊಳ್ಳುವುದಕ್ಕೋಸುಗ ಪ್ರತಿಷ್ಠಾಪನೆ ಮಾಡಿರುತ್ತಾರೆ.

ತಾತ್ಪರ್ಯ

ನಾನು ಉಪಾಸಕರಿಗೆ, ಸರ್ವಸ್ವಾಮಿನಿಯಾಗಿ ದೈವಮಾನುಷ ಸಂಪತ್ತನ್ನು ಹೊಂದಿಸಿಕೊಡುವವಳು. ಜಗನ್ನಿರ್ಮಾಣ ಮಾಡಿದವಳು, ಯಜ್ಞದಲ್ಲಿ ಆರಾಧ್ಯರಾದ ದೇವತೆಗಳಲ್ಲಿ ಪ್ರಥಮ ಪೂಜಾರ್ಹಳು. ಬಹುರೂಪದಿಂದ ವಿಶಿಷ್ಟಳಾಗಿ, ದುರ್ಗಾ, ಕಾಲೀ, ಅಂಬಿಕಾ, ಭಗವತೀ, ಇತ್ಯಾದಿ ನಾನಾ ರೂಪದಿಂದ ಇರುವವಳು. ಹಾಗೆಂದು ಶಿವದುರ್ಗೆ, ಚಂಡಿಕಾದಿಗಳಿಗೆ ಐಕ್ಯವನ್ನು ಹೇಳದೆ ಹೆಚ್ಚಾಗಿ ಆವಿಷ್ಟಮಾತ್ರದಿಂದ ಇರುವವಳು. ಭಕ್ತಜನರು, ಕರವೀರಪುರ, ವಿಂಧ್ಯ ಮೊದಲಾದ ಕ್ಷೇತ್ರಗಳಲ್ಲಿ ನನ್ನನ್ನು ಪ್ರತಿಷ್ಠಿಸಿ ಪೂಜಿಸುವರು.

ಮಯಾ ಸೋ ಅನ್ನಮತ್ತಿ ಯೋ ವಿಪಶ್ಯತಿ
ಯಃ ಪ್ರಾಣಿತಿ ಯ ಈಂ ಶೃಣೋತ್ಯುಕ್ತಮ್ ।
ಅಮಂತ ವೋಮಾಂ ತ ಉಪಕ್ಷಿಯಂತಿ
ಶ್ರುಧಿ ಶ್ರುತ ಶ್ರದ್ಧಿವಂತೇ ವದಾಮಿ ॥ ೪ ॥

ಅನ್ವಯ

ಯಃ ಅನ್ನಮತ್ತಿ ಸಃ ಮಯಾ ಯಃ ವಿಪಶ್ಯತಿ ಯಃ ಪ್ರಾಣಿತಿ ಯಃ ಉಕ್ತಂ ಶೃಣೋತಿ ಮಯಾ ಈಂ ಅಮಂತವಃ ಉಪಕ್ಷಿಯಂತಿ ಶ್ರುತ ಶ್ರದ್ಧಿವಂತೇ ವದಾಮಿ ಶ್ರುಧಿ ॥

ಮಂತ್ರಾರ್ಥ

ಯಃ ಅನ್ನಮತ್ತಿ ಸಃ ಮಯಾ – ಯಾವನು ಅನ್ನವನ್ನು ಭಕ್ಷಣ ಮಾಡುತ್ತಾನೋ ಅವನು ನನ್ನಿಂದ ಪ್ರೇರಿಸಲ್ಪಟ್ಟವನೇ, ನನ್ನಿಂದ ಕೊಡಲ್ಪಟ್ಟ ಭೋಕ್ತೃ ಶಕ್ತಿ ಉಳ್ಳವನೇ, ಯಃ ವಿಪಶ್ಯತಿ–ಯಾವನು ಹುಟ್ಟಿದ ವಿವಿಧ ವಸ್ತುವನ್ನು ನೋಡುತ್ತಾನೋ, ಅವನು ನನ್ನಿಂದಲೇ ಪ್ರೇರಿಸಲ್ಪಟ್ಟು, ನನ್ನಿಂದ ಕೊಡಲ್ಪಟ್ಟ ದೃಷ್ಟಿಸಾಮರ್ಥ್ಯವುಳ್ಳ, ಯಃ ಪ್ರಾಣಿತಿ–ಯಾವನು ಶ್ವಾಸೋ-ಚ್ಛ್ವಾಸವನ್ನು ಮಾಡುತ್ತಾನೋ ಅವನೂ ಕೂಡ ನನ್ನ ಸಾಮರ್ಥ್ಯದಿಂದಲೇ, ಯಃ ಉಕ್ತಂ–ಪರನಿಂದಉಚ್ಚಾರಿತವಾದ ವಾಕ್ಯಗಳನ್ನೂ, ಶೃಣೋತಿ (ಸೋಪಿ)–ಕೇಳುವುದೂ ಕೂಡ, ಮಯಾ ಈಂ–ನನ್ನಿಂದಲೇ ಕೇಳುತ್ತಾನೆ. [ಹೀಗೆ ಸರ್ವ-ಪ್ರೇರಕಳಾಗಿಯೂ ಸರ್ವದರಲ್ಲಿಯೂ ಸ್ಥಿತಳಾದ ನನ್ನನ್ನು] ಅಮಂತವಃ–ನಿರಪರಾಧಿಗಳು, ಯೇ ತೇ ಉಪಕ್ಷಿಯಂತಿ – ನನ್ನ ಸಮೀಪದಲ್ಲೇ ಇದ್ದು ನನ್ನನ್ನೇ ಭಜನೆ ಮಾಡಿಕೊಂಡಿರುವವರು ಯಾರೋ, ಅಥವಾ ಅಮಂತವಃ – ಈ ಮೇಲೆ ಹೇಳಿದ ರೀತಿಯಲ್ಲಿ ನನ್ನನ್ನು ತಿಳಿಯದೇ ಇರುವ ನನ್ನ ಅಭಕ್ತರು, ಉಪ-ಕ್ಷಿಯಂತಿ–ಕ್ಷೀಣರಾಗುತ್ತಾರೆ. (ತಸ್ಮಾತ್ ಹೇ) ಶ್ರುತ–ಆದ್ದರಿಂದ ಪ್ರಸಿದ್ಧರಾದ

ಎಲೈ ಸಾಧುವರ್ಗವೇ, ಶ್ರದ್ಧಿವಂ–ಶ್ರದ್ಧಪೂರ್ವಕ ಶ್ರವಣಾದಿಗಳಿಗೆ ಗಮ್ಯನಾದ ಪರಮಾತ್ಮನನ್ನು, ತೇ – ನಿಮಗೆ, ವದಾಮಿ – ವೇದಾಭಿಮಾನಿಯಾದ ನಾನು "ಬ್ರಹ್ಮನು ವಿಶಿಷ್ಟವಾದ ಜ್ಞಾನ ಆನಂದ ಉಳ್ಳವನು" ಎಂದು ವೇದಮುಖದಿಂದ ಉಪದೇಶ ಮಾಡುತ್ತೇನೆ, ಶ್ರುಧಿ–ಕೇಳುವವರಾಗಿ.

ತಾತ್ಪರ್ಯ

ಯಾವನು ಅನ್ನವನ್ನು ಭಕ್ಷಣ ಮಾಡುತ್ತಾನೋ, ಅವನಿಗೆ ಭೋಕ್ತೃ-ಶಕ್ತಿಯನ್ನೂ ಹುಟ್ಟಿದ ವಿವಿಧ ವಸ್ತುವನ್ನು ನೋಡಲು ಸಾಮರ್ಥ್ಯವನ್ನೂ, ಶ್ವಾಸೋಚ್ಛ್ವಾಸ ಸಾಮರ್ಥ್ಯವನ್ನೂ, ಪರನಿಂದ ಉಚ್ಚರಿತ ವಾಕ್ಯಗಳ ಶ್ರವಣ-ಸಾಮರ್ಥ್ಯವನ್ನೂ, ಸರ್ವಪ್ರೇರಕಳಾಗಿ, ಸರ್ವದಲ್ಲೂ ಸ್ಥಿತಳಾದ ನನ್ನನ್ನು ಯಾರು ತಿಳಿಯುವುದಿಲ್ಲವೋ ಅವರು ಕ್ಷೀಣರಾಗುತ್ತಾರೆ. ಆದ್ದರಿಂದ ಎಲೈ ಸಾಧುವರ್ಗವೇ, ನೀವು ಶ್ರದ್ಧಾಪೂರ್ವಕ, ಶ್ರವಣಮನನಾದಿಗಳಿಗೆ ಗಮ್ಯನಾದ ಪರಮಾತ್ಮನನ್ನು, ವೇದಾಭಿಮಾನಿಯಾದ ನಾನು, ವೇದಮುಖದಿಂದ ಉಪದೇಶಿ-ಸುತ್ತೇನೆ, ಕೇಳುವವರಾಗಿ.

ಅಹಮೇವ ಸ್ವಯಮಿದಂ ವದಾಮಿ
ಜುಷ್ಟಂ ದೇವೇಭಿರುತ ಮಾನುಷೇಭಿಃ ।
ಯಂಕಾಮಯೇ ತಂ ತಮುಗ್ರಂ ಕೃಣೋಮಿ
ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಮ್ ॥ ೫ ॥

ಅನ್ವಯ

ದೇವೇಭಿಃ ಮಾನುಷೇಭಿರುತ ಜುಷ್ಟಂ ಇದಂ ಅಹಮೇವ ಸ್ವಯಂ ವದಾಮಿ। ಅಹಂ ಯಂ ಯಂ ಉಗ್ರಂ ಕಾಮಯೇ ತಂ ತಂ ರುದ್ರಂ ಕೃಣೋಮಿ। ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ ॥

ಮಂತ್ರಾರ್ಥ

ದೇವೇಭಿಃ–ಬ್ರಹ್ಮಾದಿ ದೇವತೆಗಳಿಂದಲೂ, ಮಾನುಷೇಭಿರುತ–ಮನುಷ್ಯ ರಿಂದಲೂ ಕೂಡ ಅಥವಾ ಉತ–ಋಷಿ ಗಂಧರ್ವಾದಿಗಳಿಂದಲೂ ಕೂಡ, ಜುಷ್ಟಂ–ಸೇವ್ಯಮಾನ್ಯಳಾದ, ಇದಂ–ಹೀಗೆ ಹೇಳಲ್ಪಟ್ಟ, ಅಹಮೇವ ಸ್ವಯಂ– ನಾನೇ ಮುಖ್ಯವಾಗಿ, ಅಂದರೆ ಇನ್ನೊಬ್ಬರು ಹೇಳಿದ್ದನ್ನು ಅನುವಾದ ಮಾಡುವು ದಿಲ್ಲವೆಂದು ಏವಕಾರದ ಅರ್ಥ. ಅದು ಹೇಗೆ ಎಂದರೆ, ಅಹಂ ಯಂ ಯಂ ಉಗ್ರಂ– ನಾನು ಯಾರು ಯಾರನ್ನು ರುದ್ರನನ್ನಾಗಿ, ಕಾಮಯೇ–ಮಾಡಲಿಚ್ಛಿಸುವೆನೋ, ತಂ ತಂ ರುದ್ರಂ ಕೃಣೋಮಿ–ಅವರನ್ನು ರುದ್ರನನ್ನಾಗಿ ಮಾಡುತ್ತೇನೆ. ಯಂ ಬ್ರಹ್ಮಾಣಂ–ಯಾರನ್ನು ಬ್ರಹ್ಮನನ್ನಾಗಿ ಮಾಡಲು ಇಚ್ಛಿಸುವೆನೋ ಅವರನ್ನು ಬ್ರಹ್ಮನನ್ನಾಗಿ ಮಾಡುತ್ತೇನೆ. ಯಮೃಷಿಂ–ವಸಿಷ್ಠಾದಿ ಋಷಿಗಳನ್ನು ಮಾಡ ಲಿಚ್ಛಿಸುವೆನೋ ಅವರನ್ನು ಋಷಿಗಳನ್ನಾಗಿ ಮಾಡುತ್ತೇನೆ. ಯಂ ಸುಮೇಧಾಂ– ಯಾರನ್ನು ಮೇಧಾವಂತನನ್ನಾಗಿ ಮಾಡಲಿಚ್ಛಿಸುವೆನೋ ಅವರನ್ನು ಮೇಧಾ- ವಂತರನ್ನಾಗಿ ಮಾಡುತ್ತೇನೆ.

ತಾತ್ಪರ್ಯ

ನಾನು (ಅಂಭೃಣೀನಾಮಕ ಲಕ್ಷ್ಮಿಯು) ಬ್ರಹ್ಮಾದಿ ದೇವತೆಗಳಿಂದಲೂ, ಮನುಷ್ಯ ಗಂಧರ್ವಾದಿಗಳಿಂದಲೂ ಸೇವ್ಯಮಾನ್ಯಳಾಗಿ, ನಾನೇ ಮುಖ್ಯತಃ ಯಾರುಯಾರು ಬ್ರಹ್ಮ ರುದ್ರ ಋಷ್ಯಾದಿ ಪದವಿಗೆ ಯೋಗ್ಯರೋ ಅವರಿಗೆ ಆ ಪದವಿಯನ್ನು ಕೊಟ್ಟು ಅವರು ನನ್ನ ಅಧೀನದಲ್ಲಿರುತ್ತಾರೆಂಬ ಭಾವ.

ಅಹಂ ರುದ್ರಾಯ ಧನುರಾತನೋಮಿ
ಬ್ರಹ್ಮದ್ವಿಷೇ ಶರವೇ ಹಂತವಾಉ ।
ಅಹಂ ಜನಾಯ ಸಮದಂ ಕೃಣೋಮ್ಯಹಂ
ದ್ಯಾವಾ ಪೃಥಿವೀ ಆ ವಿವೇಶ ॥ ೬ ॥

ಅನ್ವಯ

ಅಹಂ ಶರವೇ ಬ್ರಹ್ಮದ್ವಿಷೇ ರುದ್ರಾಯ ಹಂತವೈ ಉ ಧನುಃ ಆತನೋಮಿ। ಅಹಂ ಜನಾಯ ಸಮದಂ ಕೃಣೋಮಿ । ಅಹಂ ದ್ಯಾವಾ ಪೃಥಿವೀ ಆವಿವೇಶ ॥

ಮಂತ್ರಾರ್ಥ

ಅಹಂ–ಅಂಭೃಣೀನಾಮಕ ಲಕ್ಷ್ಮಿಯು, ಶರವೇ–ಹಿಂಸಕನಾದ, ಬ್ರಹ್ಮ-ದ್ವಿಷೇ–ಚತುರ್ಮುಖಬ್ರಹ್ಮನ ಐದನೇ ತಲೆಯನ್ನು ಛೇದನಮಾಡಿದ, ರುದ್ರಾಯ–ರುದ್ರನನ್ನು (ದ್ವಿತೀಯಾರ್ಥದಲ್ಲಿ ಚತುರ್ಥೀ ವಿಭಕ್ತಿ), ಹಂತವೈ ಉ–ಕೊಲ್ಲುವುದಕ್ಕೋಸ್ಕರವೇ, ಧನುಃ–ಧನುಸ್ಸನ್ನು, ಆತನೋಮಿ–ಸಂಧಾನವನ್ನು ಮಾಡುತ್ತೇನೆ. ಅಹಂ ಜನಾಯ–ಭಕ್ತಜನರನ್ನು (ದ್ವಿತೀಯಾರ್ಥದಲ್ಲಿ ಚತುರ್ಥೀ ವಿಭಕ್ತಿ), ಸಮದಂ – ಐಶ್ವರ್ಯಾದಿ ದಾನಗಳಿಂದ ಉತ್ಸಾಹಯುಕ್ತರನ್ನಾಗಿ, ಕೃಣೋಮಿ–ಮಾಡುತ್ತೇನೆ. ಅಹಂ ದ್ಯಾವಾ ಪೃಥಿವೀ–ನಾನು ಊರ್ಧ್ವ ಮತ್ತು ಅಧೋಲೋಕಗಳಲ್ಲಿ, ಆವಿವೇಶ–ನಾನೇ ಪ್ರವೇಶಮಾಡಿ ಧರಿಸುತ್ತೇನೆ ಅಥವಾ ಪೋಷಣೆ ಮಾಡುತ್ತೇನೆ.

ತಾತ್ಪರ್ಯ

ನಾನು ಬ್ರಹ್ಮನ ಐದನೇ ತಲೆಯನ್ನು ಛೇದನಮಾಡಿದ ರುದ್ರದೇವರನ್ನು ಕೊಲ್ಲಲು ಶರಸಂಧಾನ ಮಾಡುತ್ತೇನೆ. ಭಕ್ತಜನರನ್ನು ಐಶ್ವರ್ಯಾದಿ ದಾನಗಳಿಂದ ಉತ್ಸಾಹಯುಕ್ತರನ್ನಾಗಿ ಮಾಡುತ್ತೇನೆ. ನಾನು ಊರ್ಧ್ವ ಮತ್ತು ಅಧೋ-ಲೋಕಗಳನ್ನು ಪ್ರವೇಶಮಾಡಿ ಧರಿಸಿ, ಪೋಷಣೆ ಮಾಡುತ್ತೇನೆ.

ಅಹಂ ಸುವೇ ಪಿತರಮಸ್ಯ ಮೂರ್ಧನ್ಮಮ
ಯೋನಿರಪ್ಸ್ವಂತಃ ಸಮುದ್ರೇ।
ತತೋ ವಿತಿಷ್ಠೇ ಭುವನಾನು ವಿಶ್ವೋ-
ತಾಮೂಂ ದ್ಯಾಂ ವರ್ಷ್ಮಣೋಪಸ್ಪೃಶಾಮಿ ॥ ೭ ॥

ಅನ್ವಯ

ಅಹಂ ಅಸ್ಯ ಪಿತರಂ ಮೂರ್ಧನ್ ಸುವೇ। ಮಮ ಯೋನಿಃ ಸಮುದ್ರೇ ಅಪ್ಸು ಅಂತಃ ತತಃ ವಿಶ್ವಾ ಭುವನಾ ಅನು ವಿತಿಷ್ಠೇ ಅಮುಂ ಧ್ಯಾಂ ಉತ ವರ್ಷ್ಮಣಾ ಉಪಸ್ಪೃಶಾಮಿ॥

ಮಂತ್ರಾರ್ಥ

ಅಹಂ ಅಸ್ಯ–ನಾನು (ಅಂಭೃಣೀ) ಈ ಜಗತ್ತಿಗೆ, ಪಿತರಂ–ಬ್ರಹ್ಮನನ್ನು, ಮೂರ್ಧನ್–ತಲೆಯಿಂದ ಅಂದರೆ ಸರ್ವೋತ್ಕೃಷ್ಟತ್ವದಿಂದ, ಸುವೇ – ಪ್ರಸವಿಸುತ್ತೇನೆ. ಅಂದರೆ ಬ್ರಹ್ಮಾದಿಗಳಿಗೆ ಕೇವಲ ಹಿಂದೆ ಹೇಳಿದಂತೆ ಪದವಿಗಳನ್ನು ಕೊಡುವುದಲ್ಲದೆ ಅವರನ್ನು ಪ್ರಸವಿಸುತ್ತೇನೆ. ಸರ್ವಶ್ರೇಷ್ಠತೆಯಿಂದ ಬ್ರಹ್ಮನು ನನ್ನ ಮಗನೆಂಬ ಭಾವಾರ್ಥ. ಇಷ್ಟೆಲ್ಲಾ ನಾನು ಪಡೆದಿದ್ದರೂ, ನನ್ನನ್ನು ಹಡೆದವನು ಒಬ್ಬನಿದ್ದಾನೆ, ಎಂದು ಹೇಳುವುದಕ್ಕೋಸ್ಕರ ' ಮಮ ಯೋನಿ ' ಎಂದು ಪ್ರಯೋಗ ಮಾಡಲಾಗಿದೆ. ಮಮ ಯೋನಿಃ–ನನಗೆ ಕಾರಣಭೂತನಾದ ಭಗವಂತನು, ಸಮುದ್ರೇ ಅಪ್ಸು ಅಂತಃ–ಸಮುದ್ರಜಲಮಧ್ಯದಲ್ಲಿ ನಿಂತಿರುತ್ತಾನೆ. ಗುರುವಿನ ಹೆಸರನ್ನು ಶಿಷ್ಯನು, ಗಂಡನ ಹೆಸರನ್ನು ಹೆಂಡತಿಯು ಹೇಳಬಾರದೆಂದು ಲಕ್ಷಣಮುಖದಿಂದ ಹೇಳಿರುತ್ತಾಳೆ. ಮಹಾಸಾಗರದಲ್ಲಿ ಶಯನಮಾಡುವ ' ನಾರಾಯಣ ' ಎಂದು ತಿಳಿಯಬೇಕು. ವಿಶೇಷಾರ್ಥವೇನೆಂದರೆ, ಅಂಭೃಣೀ-ನಾಮಕಳಾದ ನನಗೆ ಕಾರಣಭೂತನಾದವನು ಸಮುದ್ರದ ನೀರಿನ ಮಧ್ಯದಲ್ಲಿ ನಿಂತಿರುವನು, ಹೀಗೆಂದು ಹೇಳುವುದಕ್ಕೋಸ್ಕರ ಗುಹ್ಯಾರ್ಥಕವಾಗಿ ' ಯೋನಿ ' ಶಬ್ದವನ್ನು ಪ್ರಯೋಗಿಸಲಾಗಿದೆ. ಮತ್ತು ಇದು ಹೇಳುವಾಗ ಲಜ್ಜಾದಿಂದ ' ಅಪ್ಸ್ವಂತಃ ಸಮುದ್ರೇ ' ಹೀಗೆಂದು ಕಂಪವು (ಬಾಯಿ ತೊದಲುತ್ತದೆ) ಅಂದರೆ ಗಂಡನ ಹೆಸರು ಹೇಳುವುದಕ್ಕೆ ಕಂಪ ಉಂಟಾಗುತ್ತದೆ ಎಂದು ಗ್ರಹಿಸಬೇಕು. ತತಃ–ಯಾವ ಕಾರಣದ ದೆಸೆಯಿಂದ ನಾನು ಸರ್ವಸ್ವಾಮಿನಿಯಾಗಿ, ಚತುರ್ಮುಖನ ತಾಯಿಯಾಗಿ, ನಾರಾಯಣನಿಗೆ ಹೆಂಡತಿಯಾಗಿದ್ದೇನೆಯೋ, ಆ ಕಾರಣದಿಂದ, ವಿಶ್ವಾ ಭುವನಾ – ಹದಿನಾಲ್ಕು ಲೋಕಗಳನ್ನು, ಅನು – ವಿಷ್ಣುವಿನ ನಂತರದಲ್ಲಿ (ವಿಷ್ಣುವನ್ನು ಬಿಟ್ಟರೆ ನಂತರ ನಾನೇ), ವಿತಿಷ್ಠೇ–ವ್ಯಾಪಿಸಿ ಇರುತ್ತೇನೆ. ಅದರ ವಿವರಣೆ: ಅಮುಂ ಧ್ಯಾಂ–ಈ ಮೇಲಿನ ಲೋಕ

ಗಳನ್ನೂ, ಉತ–ಅಧೋಲೋಕಗಳನ್ನೂ, ವರ್ಷ್ಮಣಾ–ದೇಹದಿಂದ, ಉಪಸ್ಪೃಶಾಮಿ–ವ್ಯಾಪಿಸಿ ಇರುತ್ತೇನೆ.

ತಾತ್ಪರ್ಯ

ಅಂಭೃಣೀನಾಮಕಳಾದ ನಾನು ಕೇವಲ ಬ್ರಹ್ಮಪದವಿಗಳನ್ನಷ್ಟೆ ಕೊಡುವುದಲ್ಲದೆ ಅವರನ್ನು ಪ್ರಸವಿಸುತ್ತೇನೆ. ಇಷ್ಟೆಲ್ಲಾ ಅಧಿಕಾರ ನಾನು ಪಡೆದಿದ್ದರೂ, ನನ್ನನ್ನು ಪಡೆದವನು ಸಮುದ್ರಜಲಮಧ್ಯದಲ್ಲಿ ಇರುತ್ತಾನೆ. ಅವನ ಹೆಸರು ಹೇಳುವುದಕ್ಕೆ ನಾಚಿಕೆಯಾಗಿರುತ್ತದೆ. ಅವನಿಂದಲೇ ಹದಿನಾಲ್ಕು ಲೋಕಗಳನ್ನು ಅವನನ್ನು ಬಿಟ್ಟರೆ ನಾನೇ ಊರ್ಧ್ವಾದಿ ಅಧೋಲೋಕಗಳಲ್ಲೂ ನನ್ನ ದೇಹದಿಂದ ವ್ಯಾಪಿಸಿಕೊಂಡಿರುತ್ತೇನೆ.

"ಗುರೋರ್ನಾಮ ನ ಗೃಹ್ಣೀಯಾಚ್ಛಿಷ್ಯೋ ಭಾರ್ಯಾ ಪತೇರಪಿ" ಎಂದು ಸ್ಮೃತಿಯು ಹೇಳುತ್ತದೆ. ಗುರುಗಳ ಹೆಸರನ್ನು ಶಿಷ್ಯನೂ, ಗಂಡನ ಹೆಸರನ್ನು ಪತ್ನಿಯೂ ಹೇಳಬಾರದು. ಆದ್ದರಿಂದ ಲಕ್ಷಣಮುಖದಿಂದ ನಾರಾಯಣ ಎಂಬ ಅರ್ಥ ಬರುವ "ಸಮುದ್ರಜಲಮಧ್ಯದಲ್ಲಿ ಇರುವವನು" ಎಂದು ಕಂಪನದಿಂದ ಹೇಳುತ್ತಾಳೆ.

ಅಹಮೇವ ವಾತ ಇವ ಪ್ರವಾಮ್ಯಾರಭ-

ಮಾಣಾ ಭುವನಾನಿ ವಿಶ್ವಾ ।

ಪರೋ ದಿವಾ ಪರ ಏನಾ ಪೃಥಿವ್ಯೈ-

ತಾವತೀ ಮಹಿನಾ ಸಂಬಭೂವ ॥ ೮ ॥

ಅನ್ವಯ

ಅಹಮೇವ ವಿಶ್ವಾ ಭುವನಾನಿ ಆರಭಮಾಣಾ ವಾತ ಇವ ಅಹಂ ಪ್ರವಾಮಿ । ಸಃ ದಿವಾ ಪರಃ ಏನಾ ಪೃಥಿವ್ಯಾ ಅಹಂತು ಮಹಿನಾ ಏತಾವತೀ ಸಂಬಭೂವ ॥

ಮಂತ್ರಾರ್ಥ

ಅಹಮೇವ–ನಾನೇ, ವಿಶ್ವಾ ಭುವನಾನಿ–ಚತುರ್ದಶ ಲೋಕಗಳನ್ನು, ಆರಭಮಾಣಾ–ಉತ್ಪಾದನೆ ಮಾಡುತ್ತೇನೆ. ನಾನು ಕೇವಲ ಆಕಾಶಾದಿಗಳಂತೆ ಸರ್ವತ್ರದಲ್ಲೂ ವ್ಯಾಪಿಸಿಕೊಂಡು ಇರುವುದಷ್ಟೇ ಅಲ್ಲದೆ, ಆ ಲೋಕಗಳನ್ನೂ ಉತ್ಪಾದನೆ ಮಾಡುತ್ತೇನೆ. ವಾತ ಇವ–ವಾಯುವಿನಂತೆ, ಅಹಂ ಪ್ರವಾಮಿ–ಲೇಪವಿಲ್ಲದಂತೆ ಸಂಚರಿಸುತ್ತೇನೆ. ಅಂದರೆ ಸರ್ವವನ್ನೂ ಉತ್ಪಾದನೆ ಮಾಡಿ, ಅದರಲ್ಲಿದ್ದುಕೊಂಡು, ಅದರ ದೋಷಲೇಪನವೆಂಬುದು ನನಗಿಲ್ಲವೆಂಬುದು ಅರ್ಥ. ಇನ್ನು ತನ್ನ ಮಹಿಮೆಯನ್ನೂ, ಭಗವಂತನ ಮಹಿಮೆಯನ್ನೂ ಹೇಳಿ ಉಪಸಂಹಾರ ಮಾಡುತ್ತಾಳೆ : ಯಾರು ಸಮುದ್ರಜಲಮಧ್ಯದಲ್ಲಿದ್ದು ನನಗೆ ಕಾರಣಕರ್ತನೋ ಅವನು, ಪಃ ದಿವಾ – ಅವನು ಸ್ವರ್ಗಾದಿ ಲೋಕಗಳಿಂದ, ಪರಃ – ಉತ್ತಮನು, ಏನಾ ಪೃಥಿವ್ಯಾ – ಈ ಭೂಮಿಗಿಂತಲೂ, ಪರಃ – ಉತ್ತಮನು. ಉಪಲಕ್ಷಣದಿಂದ ವಿಶ್ವಕರ್ಮಸೂಕ್ತದಲ್ಲಿ ಹೇಳಿದಂತೆ ದೇವಾಸುರರಿಗಿಂತಲೂ ಉತ್ತಮನು. ಅಹಂ ತು ಮಹಿನಾ–ನನ್ನ ಮಹಿಮೆಯಾದರೋ, ಏತಾವತೀ–ಪರಿಮಿತಿಯುಳ್ಳದ್ದು. ಸಂಬಭೂವ–ನನ್ನ ಮಹಿಮೆಯು ಇಷ್ಟೇ ಎಂದು ಪರಿಮಿತಿ ಉಳ್ಳದ್ದು. ನನಗೆ ಕಾರಣಭೂತನಾದ ನಾರಾಯಣನ ಮಹಿಮೆಯಾದರೋ ಅಪರಿಮಿತವಾದ ಕಲ್ಯಾಣಗುಣಗಳಿಂದ ಪೂರ್ಣವಾದದ್ದು.

ತಾತ್ಪರ್ಯ

ನಾನು ಕೇವಲ ಆಕಾಶಾದಿಗಳಂತೆ ಸರ್ವತ್ರದಲ್ಲೂ ವ್ಯಾಪಿಸಿಕೊಂಡಿರುವುದಷ್ಟೇ ಅಲ್ಲದೆ, ಆ ಲೋಕಗಳನ್ನೂ ಉತ್ಪಾದನೆ ಮಾಡುತ್ತೇನೆ. ಆ ಲೋಕಗಳನ್ನು ಸೃಷ್ಟಿಮಾಡಿದರೂ, ಅದರ ದೋಷಲೇಪ ನನಗೆ ಇಲ್ಲ. ಯಾರು ನನಗೆ ಕಾರಣಕರ್ತನೋ ಅವನು ದೇವಾಸುರರಿಗಿಂತಲೂ ಉತ್ತಮನು. ನನ್ನ ಮಹಿಮೆ ಪರಿಮಿತಿ ಉಳ್ಳದ್ದು, ಆದರೆ ನಾರಾಯಣನ ಮಹಿಮೆ ಇಷ್ಟೇ ಎಂದು ಹೇಳಲು ಸಾಧ್ಯವಿಲ್ಲ.

ಇತಿ ಶ್ರೀ ಅಂಭೃಣೀನಾಮಕಲಕ್ಷ್ಮೀ ಪ್ರೀತ್ಯರ್ಥಂ ಅಷ್ಟಾರ್ಚ ಅಂಭೃಣೀಸೂಕ್ತ ಮಂತ್ರ ಕರ್ನಾಟಕ ಭಾಷಾಯಾಂ ವ್ಯಾಖ್ಯಾನಂ ಸಂಪೂರ್ಣಮ್

॥ ಶ್ರೀ ಮಧ್ವೇಶಾರ್ಪಣಮಸ್ತು ॥